# ಪೀಠಿಕೆ :-

ಸ್ವಾಮಿ ವಿವೇಕಾನಂದ ಭಾರತದ ಅತ್ಯಂತ ಪ್ರಸಿದ್ಧ ಆ ಪ್ರಭಾವಶಾಲಿ ತತ್ವಜ್ಞಾನಿಗಳಲ್ಲಿ ಒಬ್ಬರು. ಸ್ವಾಮಿ ವಿವೇಕಾನಂದ ಜೀವನ ಸಂದೇಶಗಳಲ್ಲಿ ವಿಶೇಷವಾಗಿ ಯುವ ಜನರ ಮೇಲೆ ಪ್ರಭಾವ ಬೀರುವ ಬಾಳು ಬೆಳಗುವ ಅಂಶಗಳಿದ್ದವು. ಇವರು 1863, ಜನವರಿ 12 ರಂದು ಕೋಲ್ಕತ್ತದಲ್ಲಿ ಜನಿಸಿದರು. ತಂದೆ- ವಿಶ್ವನಾಥದತ್ತ ತಾಯಿ- ಭುವನೇಶ್ವರಿ ದೇವಿ. ಇವರ ಮೊದಲ ಹೆಸರು ನರೇಂದ್ರನಾಥದತ್ತ. ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯರಾದ ಮೇಲೆ "ವಿವೇಕಾನಂದ" ಎಂಬ ಹೆಸರು ಬಂದು. ವಿವೇಕಾನಂದರು ಭಾರತದ ತತ್ವಜ್ಞಾನ, ಯೋಗ, ವೇದಾಂತ ಇವೆಲ್ಲವನ್ನು ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಚಾರ ಮಾಡಿದರು. ಸರ್ವಧರ್ಮ ಸಮ್ಮೇಳನದ ಭಾಷಣದಲ್ಲಿ ಪ್ರತಿಪಾದಿಸಿದ ಹಿಂದೂ ಧರ್ಮದ ಸಿದ್ಧಾಂತಗಳು, ಮಿಂಚಿನಂತೆ ಅಲ್ಲಿನ ಜನರನ್ನು ಆಕರ್ಷಿಸಿದವು. ಅವರು ಚಿಕಾಗೋ ನಗರದಲ್ಲಿ ನಡೆದ ಭಾಷಣದಲ್ಲಿ ಮೊದಲ ವಾಕ್ಯವಾದ 'ಅಮೇರಿಕದ ಸಹೋದರ ಸಹೋದರಿಯರೇ' ಎಂಬ ವಾಕ್ಯ ಚಿರಸ್ಮರಣೀಯವಾಗಿದೆ. ಭಾರತದ ಸಂಸ್ಕೃತಿ, ಸಿರಿವಂತಿಕೆ, ಜ್ಞಾನ, ಧರ್ಮ ಇವೆಲ್ಲದರ ವಿರಾಟ್ ರಾಯಭಾರಿ ಸ್ವಾಮಿ ವಿವೇಕಾನಂದರು.

Scanned with CamScanner

## → ಯುವಕರ ಏಳ್ಗೆಗಾಗಿ ಸ್ವಾಮಿ ವಿವೇಕಾನಂದರು :-

'ಏಳಿ ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ' ಎಂಬ ಮಾತನ್ನು ಹೇಳಿ ಯುವ ಜನರ ಮನದಲ್ಲಿ ಗಟ್ಟಿಯಾಗಿ ನೆಲೆಯೂರುವಂತೆ ಮಾಡಿದ ಮಹಾನ್ ವ್ಯಕ್ತಿ ಸ್ವಾಮಿ ವಿವೇಕಾನಂದರು ಯುವಕರೆಂದರೆ ಸ್ವಾಮಿ ವಿವೇಕಾನಂದರಿಗೆ ಪಂಚಪ್ರಾಣ. ಮನದ ಸೋಂಬೇರಿತನವನ್ನು ಬಡಿದೆಬ್ಬರಿಸುವ ಅವರ ನುಡಿಮುತ್ತುಗಳು ಸದಾ ಕಾಲಕ್ಕೂ ಸ್ಫೂರ್ತಿ ನೀಡುವಂಥದ್ದು.

## → ವಿವೇಕಾನಂದರ ನುಡಿಮುತ್ತುಗಳು -

* ಅದೃಷ್ಟ ಎಂದರೆ ಅವಕಾಶವನ್ನು ಪಡೆಯುವವನು, ಬುದ್ಧಿವಂತ ಎಂದರೆ ಅವಕಾಶವನ್ನು ಸೃಷ್ಟಿಸಿಕೊಳ್ಳುವವನು.

* ಸಾಧ್ಯವೇ ಇಲ್ಲ ಎಂದುಕೊಂಡರೆ ಏನನ್ನು ಸಾಧಿಸಲಾಗದು. ಪ್ರಯತ್ನಿಸುವುದರಿಂದ ನಷ್ಟವೇನಿದೆ ? ಗೆದ್ದರೆ ಸಂತೋಷ, ಸೋತರೆ ಅನುಭವ.

* ನಮ್ಮ ದು:ಖಗಳಿಗೆಲ್ಲ ನಾವೇ ಜವಾಬ್ದಾರರು, ಮತ್ತಾರೂ ಅಲ್ಲ. ನಮ್ಮ ಅದೃಷ್ಟವನ್ನು ರೂಪಿಸಿಕೊಳ್ಳುವವರು ನಾವೇ.

* ಬದುಕುವ ಆಸೆ ಇದ್ದರೆ ನಿನ್ನ ಶತ್ರುಗಳ ಕಣ್ಣೆದುರಲ್ಲಿ ಬದುಕು. ಅವರು ನಿನ್ನೆದುರಲ್ಲಿ ಸಾಯುವಾಗಲೆಲ್ಲ ನಿನ್ನಲ್ಲಿ ಬದುಕುವ ಛಲ ಎಚ್ಚೆತ್ತುಕೊಳ್ಳುತ್ತದೆ.

* ಧೈರ್ಯದಿಂದ ಸತ್ಯವನ್ನು ಎದುರಿಸು. ಜಯ ಎಂಬುವುದು ಕಟ್ಟಿಟ್ಟ ಬುತ್ತಿ.

* ಕಾಲ ಕೆಟ್ಟಿತೆಂದು ಜನರ ಹೇಳುತ್ತಾರೆ. ಆದರೆ, ಕಾಲ ಕೆಡುವುದಿಲ್ಲ ಕೆಡುವುದು ಜನರ ನಡತೆ ಆ ಆಚಾರ - ವಿಚಾರ ಮಾತ್ರ.

* ಮನುಷ್ಯರಲ್ಲಿ ಪರಿಪೂರ್ಣತೆಯನ್ನು ಅದ್ದಿಸುವುದೇ ಶಿಕ್ಷಣ.

Scanned with CamScanner

* ಗುರು ಎಂದರೆ ವ್ಯಕ್ತಿಯಲ್ಲ, ಒಂದು ಶಕ್ತಿ. ಅಜ್ಞಾನದ ಕತ್ತಲೆಯು ಕಳೆದು ಸುಜ್ಞಾನದೆಡೆಗೆ ಕರೆದುಕೊಂಡು ಹೋಗುವ ಶಬ್ದವೇ ಗುರು.

* ಜೀವ ನಮ್ಮ ಮಾತನ್ನು ಕೇಳುವುದಿಲ್ಲ, ಯಾವಾಗಬೇಕಾದರೂ ಹೋಗಬಹುದು. ಜೀವನ ನಮ್ಮ ಮಾತನ್ನು ಕೇಳುತ್ತದೆ, ಹೇಗೆ ಬೇಕಾದರೂ ರೂಪಿಸಿಕೊಳ್ಳಬಹುದು.

* ಸಾಧನೆ ಇಲ್ಲದೇ ಸತ್ತರೆ ಸಾವಿಗೆ ಅವಮಾನ, ಆದರ್ಶ ಇಲ್ಲದೇ ಬದುಕಿದರೆ ಬದುಕಿಗೆ ಅವಮಾನ.

* ಎದ್ದೇಳಿ, ಸಿಂಹೋನ್ಮತ್ತರಾಗಿ ಈ ಬದುಕಾದರೂ ಎಷ್ಟು ದಿನ ಮಾನವರಾಗಿ ಹುಟ್ಟಿದ ಮೇಲೆ ಏನಾದರೂ ಸಾಧಿಸಿ.

* ನಿನ್ನ ಹೃದಯದಲ್ಲಿ ಪ್ರಾಮಾಣಿಕತೆ ತುಂಬಿದ್ದರೆ ನಿನ್ನ ಶತ್ರು ಮಾತ್ರವಲ್ಲ, ಇಡೀ ಪ್ರಪಂಚ ನಿನ್ನೆದುರು ಆಯುಧವನ್ನು ಕೆಳಗಿಡುತ್ತದೆ.

* ನೀವು ಯಶಸ್ಸನ್ನು ಪಡೆಯಲು ದೃಢ ಪ್ರಯತ್ನ ಮಾಡಬೇಕು, ಅಪಾರ ಇಚ್ಛಾಶಕ್ತಿ ಬೇಕು, ನಾನು ಸಮುದ್ರವನ್ನೇ ಪಾನ ಮಾಡುತ್ತೇನೆ ಎಂದು ಪ್ರಯತ್ನಶೀಲನು ಆಗಬೇಕು.

* ಗುರಿಯ ಮೇಲೆ ಮಾತ್ರ ಗಮನವನ್ನು ಕೇಂದ್ರೀಕರಿಸಿ, ಆಗ ಯಶಸ್ಸು ನಿಮ್ಮದಾಗುತ್ತದೆ.

* ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ.

* ನಿಮ್ಮ ಆತ್ಮವಿಶ್ವಾಸಕ್ಕಿಂತ ದೊಡ್ಡ ಗೆಳೆಯ ಬೇರಾರು ಅಲ್ಲ.

* ಜ್ಞಾನ ಸಂಪಾದಿಸಬೇಕೆಂದರೆ ಇರುವ ಏಕೈಕ ಮಾರ್ಗ ಅದುವೇ ಏಕಾಗ್ರತೆ. ತಮ್ಮಲ್ಲಿ ಏಕಾಗ್ರತೆಯ ಶಕ್ತಿ ಹೆಚ್ಚಿದಷ್ಟು ಜ್ಞಾನಾರ್ಜನೆಯು ಅಧಿಕಗೊಳ್ಳುವುದು.

Scanned with CamScanner

ಈ ತರನಾದ ನುಡಿಮುತ್ತುಗಳಿಂದ ಯುವಕರನ್ನು ಹುರಿದುಂಬಿಸಿದರು. ಯುವಕರು ದೇಶದ ಸಂಪತ್ತು ಎಂದು ಭಾವಿಸಿದ್ದರು. ಈ ಕಾರಣಕ್ಕಾಗಿ ಇವರು ಹುಟ್ಟಿದ ಜನವರಿ 12 -ರಂದು ಯುವದಿನ ಎಂದು ಆಚರಿಸುತ್ತೇವೆ. ವಿವೇಕಾನಂದರ ಸಂದೇಶಗಳು ಯುವಕರಿಗೆ ಪ್ರೇರಣಾ ಶಕ್ತಿ.

## * ಶಿಕ್ಷಣ -

ಶಿಕ್ಷಣ ಎಂದರೆ :- ಮಾನವನಲ್ಲಿ ಸುಪ್ತವಾಗಿ ಅಡಗಿರುವ ದೈವದತ್ತ ಗುಣಗಳನ್ನು ಪ್ರಕಟಗೊಳಿಸುವುದು.

ಕ್ರಿ.ಶ. 1899 ರಲ್ಲಿ ಕ್ಯಾಲಿಫೋರ್ನಿಯಾದಲ್ಲಿ ಸ್ಯಾನ್ ಫ್ರಾನ್ಸಿಸ್ಕೋ "ವೇದಾಂತ" ಸಮಾಜವನ್ನು ಸ್ಥಾಪಿಸಿದರು. ಉಚಿತ ಶಿಕ್ಷಣ, ಕಡ್ಡಾಯ ಶಿಕ್ಷಣ, ಮಹಿಳಾ ಶಿಕ್ಷಣ ಈ ರಾಷ್ಟ್ರೀಯ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಆತ್ಮವಿಶ್ವಾಸ, ಹೊಂದಾಣಿಕೆ, ತ್ಯಾಗ, ಭಾವನೆ ಮುಂತಾದವು ಶಿಕ್ಷಣದ ಗುರಿಗಳಾಗಬೇಕೆಂದು ಬಯಸಿದರು. ಧರ್ಮದ ಬಗೆಗಿನ ವಿವೇಕಾನಂದರ ವ್ಯಾಖ್ಯಾನ - 'ಧರ್ಮವೆಂದರೆ ಮಾನವನಲ್ಲಿ ಈಗಾಗಲೇ ಇರುವ ದಿವ್ಯತೆಯ ಅಭಿವ್ಯಕ್ತಿ.' ಶಿಕ್ಷಣವು ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವುದಕ್ಕೆ ವ್ಯಕ್ತಿಯೊಬ್ಬ ಕೈಗೊಳ್ಳುವ ಮಹಾನ್ ಪ್ರಯತ್ನದ ಒಂದು ಭಾಗ ಮಾತ್ರ. ಯೋಗ ಪರಿಪೂರ್ಣ ಜ್ಞಾನದ ಮೂಲಕ ಆತ್ಮದ ಅಂತರಂಗದ ಬೆಳಕು ಸಂಪೂರ್ಣವಾಗಿ ಪ್ರಕಟ ಹೊಂದುವುದೇ ಅಂತರ ಶಿಕ್ಷಣವನ್ನು ದೊರಕಿಸಿಕೊಡುವ ಶಿಕ್ಷಣವೇ ಶ್ರೇಷ್ಠ ಮಟ್ಟದ ಶಿಕ್ಷಣ.

'ಶಿಕ್ಷಣವು ಮಾನವನನ್ನು ನೀಚಾತ ಸ್ತರದಿಂದ ಅಸೀಮ ಉಂತಕ್ಕೆ ಬಯಸ್ಸುವಂಥದ್ದು' ಎಂದಿದ್ದಾರೆ ಸ್ವಾಮಿ ವಿವೇಕಾನಂದ 'ಭಾರತದ ಎಲ್ಲ ಸಮಸ್ಯೆಗಳಿಗೆ ಶಿಕ್ಷಣ ಒಂದೇ ಪರಿಹಾರ' ಎಂದು ನಂಬಿದ್ದರು. "ಶಿಕ್ಷಣ ಕೇವಲ ವಿಷಯ ಸಂಗ್ರಹವಲ್ಲ, ವ್ಯಕ್ತಿಯ ನಡತೆ ರೂಪಿಸಿ, ಮಾನಸಿಕ ಶಕ್ತಿ ಈ ಬೌದ್ಧಿಕ ಮಟ್ಟ ಹೆಚ್ಚಿಸಿ ಅವನನ್ನು ಸ್ವಾವಲಂಬಿಯನ್ನಾಗಿ ಮಾಡುವ ಪ್ರಕ್ರಿಯೆಯೇ "ನಿಜವಾದ ಶಿಕ್ಷಣ" ಸ್ವಾ.ವಿ.

Scanned with CamScanner

# * ಜಾತಿ ನಿರ್ಮೂಲನೆ -

ಸ್ವಾಮಿ ವಿವೇಕಾನಂದರು ಹಿಂದುಳಿದ ಮ ದಲಿತ ಜಾತಿಗಳ ಬಗ್ಗೆ ಸಾಮಾಜಿಕ ಕಳಕಳಿಯಿತ್ತು. ಬಡಜನರ ಹಸಿವನ್ನು ಹಿಂಗಿಸುವುದಕ್ಕೆ ಮೊದಲ ಆದ್ಯತೆ ನೀಡಿರುವರು. ಭಾರತದಲ್ಲಿ ಮನೆ ಮಾಡಿದ್ದ ಬಡತನ, ದಾರಿದ್ರ್ಯ, ಅಂಧಾನುಕರಣೆಗಳನ್ನು ಕಂಡು ವಿಚಲಿತರಾಗಿ ಜೀವಮಾನವಿಡೀ ಅವುಗಳ ವಿರುದ್ಧ ಹೋರಾಟ ನಡೆಸಿದರು. ಬಡತನ ನಿರ್ಮೂಲನೆ, ಮಹಿಳೆಯರ ವಿಮೋಚನೆ ಮ ಶಿಕ್ಷಣ ಮಹತ್ವ ಕೊಟ್ಟರು.

ಸ್ವಾಮಿ ವಿವೇಕಾನಂದರು ಜಾತಿ ವ್ಯವಸ್ಥೆಯ ವಿರುದ್ಧ ಮಾರಕರಾಗಿದ್ದರು ಮ ಮೇಲ್ವರ್ಗದ ದಬ್ಬಾಳಿಕೆಯಿಂದ ತಪ್ಪಿಸಿಕೊಳ್ಳಲು ಅನೇಕ ಹಿಂದೂಗಳು ಇಸ್ಲಾಂ ಮ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳಲು ಇದು ಒಂದು ಕಾರಣ ಎಂದು ಅವರು ಭಾವಿಸಿದ್ದರು. ಹಿಂದೂ ಧರ್ಮಕ್ಕೆ ನಷ್ಟವಾಯಿತು. ಜಾತಿವಾದ-ವು ನಿಜವಾದ ಹಿಂದೂ ಧರ್ಮವಾಗಿರಲಿಲ್ಲ ಆದರೆ ನಿಜವಾದ ಹಿಂದೂ ಧರ್ಮದ ವಿರೂಪವಾಗಿತ್ತು. ಸಾಮಾಜಿಕ ಅನಿಷ್ಟವಾಗಿದ್ದು, ಅದನ್ನು ಸುಧಾರಿಸಲು ಪ್ರಯತ್ನಿಸಿದರು. ಸಾಮಾಜಿಕ ಜಾತಿ ನಿರ್ಮೂಲನೆಗೋಸ್ಕರ ಹಿಂದೂ ಧರ್ಮವನ್ನು ಎತ್ತಿ ಹಿಡಿದರು.

Scanned with CamScanner